**PAPER CLIPPINGS**

34

ಇಲಾಖೆ / ವಿಷಯ : DEPARTMENT / SUBJECT: ಅರಣ್ಯ

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ    ದಿನಾಂಕ : DATE : 11.12.20

## ವಿಧಾನಸಭೆಯಲ್ಲಿ ಮಲೆನಾಡು ಶಾಸಕರ ಗುಡುಗು | ಕೇರಳ ಮಾದರಿ ಸಮೀಕ್ಷೆಗೆ ಆಗ್ರಹ

# ಕಸ್ತೂರಿ ವರದಿ ಯಥಾವತ್ ಜಾರಿಯಾದರೆ ರಕ್ತಪಾತ

11/12/20

■ **ವಿಕ ಸುದ್ದಿಲೋಕ** ಬೆಂಗಳೂರು

ಕಸ್ತೂರಿರಂಗನ್ ವರದಿ ಜಾರಿಗೆ ರಾಷ್ಟ್ರೀಯ ಹಸಿರು ಪೀಠ ಡಿ.30ರ ತನಕ ಗಡುವು ಹಾಕಿದ್ದರೂ ಇದನ್ನು ವಿರೋಧಿಸುವ ನಿಟ್ಟಿನಲ್ಲಿ ರಾಜ್ಯ ಸರಕಾರ ಗಟ್ಟಿ-ದಿಟ್ಟ ಹೆಜ್ಜೆ ಇಟ್ಟಿಲ್ಲ. ಇದನ್ನು ಯಥಾವತ್ ಜಾರಿ ಮಾಡಿದರೆ ಪಶ್ಚಿಮ ಘಟ್ಟ ಭಾಗದ ಗ್ರಾಮಗಳಲ್ಲಿ ರಕ್ತಪಾತ ಆಗುತ್ತದೆ ಎಂದು ವಿಧಾನಸಭೆಯಲ್ಲಿ ಮಲೆನಾಡಿನ ಭಾಗದ ಶಾಸಕರು ಗುಡುಗಿದರು.

ಗುರುವಾರ ಶೂನ್ಯವೇಳೆಯಲ್ಲಿ ಬಿಜೆಪಿಯ ವಿ.ಸುನಿಲ್ ಕುಮಾರ್, ಆರಗ ಜ್ಞಾನೇಂದ್ರ, ಕೆ.ಜಿ.ಬೋಪಯ್ಯ, ಎಂ.ಪಿ. ಕುಮಾರಸ್ವಾಮಿ ಹಾಗೂ ಕುಮಾರ್ ಬಂಗಾರಪ್ಪ ಅವರು ವಿಷಯ ಪ್ರಸ್ತಾಪಿಸಿದರು.

''ಕಸ್ತೂರಿ ರಂಗನ್ ವರದಿ ಜನರ ನೆಮ್ಮದಿ ಕೆಡಿಸಿದೆ, ಅದು ಯಥಾವತ್ ಜಾರಿಯಾದರೆ ಪಶ್ಚಿಮ ಘಟ್ಟ ಭಾಗದ ಗ್ರಾಮಗಳಲ್ಲಿ ರಕ್ತಪಾತ ಆಗುತ್ತದೆ. ಸರಕಾರ ಹಾಗೂ ಅಧಿಕಾರಿಗಳು ಈ ವಿಷಯದ ಗಂಭೀರತೆಯನ್ನು ಅರ್ಥ ಮಾಡಿಕೊಂಡು ಹೊಸದಾಗಿ ಸಮೀಕ್ಷೆ ಮಾಡಿಸಬೇಕು,'' ಎಂದು ಆರಗ ಜ್ಞಾನೇಂದ್ರ ಆಗ್ರಹಿಸಿದರು.

''ವಿದೇಶಿ ದೇಣಿಗೆ ಎತ್ತಲು ಗೋವಾ ಫೌಂಡೇಷನ್ ಹಠಕ್ಕೆ ಬಿದ್ದು ಕಸ್ತೂರಿ ರಂಗನ್ ವರದಿ ಜಾರಿಗೆ ನೋಡಿಕೊಳ್ಳುತ್ತಿದೆ. ಹಸಿರುಪೀಠದಲ್ಲಿ ವರದಿ ಜಾರಿಗೆ ಸೆಪ್ಟೆಂಬರ್‌ಗೆ ಗಡುವು ನೀಡಲಾಗಿತ್ತು. ಜಾರಿಗೆ ಮಾಡದಿದ್ದರೆ ಅಧಿಕಾರಿಗಳ ಸಂಬಳ ತಡೆಗೂ ಸೂಚಿಸಿತ್ತು. ಅದೃಷ್ಟವಶಾತ್ ಕೊರೊನಾ ಬಂದು ಈಗ ಡಿಸೆಂಬರ್ 30ಕ್ಕೆ



ಹೋಗಿದೆ. ವರದಿಯ ಸಾರಾಂಶ ನೀಡಿದರೆ ರಸ್ತೆ, ನೀರು, ವಿದ್ಯುತ್ ಸಹಿತ ಯಾವುದೇ ಸವಲತ್ತು ನೀಡಲಾಗದೇ ಹಳ್ಳಿಯೇ ಬಂದ್ ಮಾಡಬೇಕಾಗುತ್ತದೆ,''ಎಂದು ಗುಡುಗಿದರು.

''ವರದಿ ವಿಚಾರದಲ್ಲಿ ಎಚ್ಚೆತ್ತ ಕೇರಳ ಗ್ರಾಮಗಳ ಮಾದರಿ ಸಮೀಕ್ಷೆ ನಡೆಸಿ, ವರದಿ ಸಿದ್ಧಪಡಿಸಿದೆ. ಅದರ ಪ್ರಕಾರ ಸೂಕ್ಷ್ಮ ವಲಯದ ವ್ಯಾಪ್ತಿ ಗಣನೀಯ ತಗ್ಗಿದೆ. ನಮ್ಮ ರಾಜ್ಯದಲ್ಲಿ ಅಂತಹ ಪೂರಕ ಕ್ರಮ ಮಾಡಿ, ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಬೇಕಿತ್ತು. ಹಿಂದಿನ ಸರಕಾರ, ಅಧಿಕಾರಿಗಳ ಅಡ್ಡಯಿಂದ ಬೆಲೆ ತೆರಬೇಕಾಗಿ ಬಂದಿದೆ,''ಎಂದು ಆತಂಕ ವ್ಯಕ್ತಪಡಿಸಿದರು. ಸ್ಪೀಕರ್ ವಿಶ್ವೇಶ್ವರ ಹೆಗಡೆ ಕಾಗೇರಿ ಅವರೂ ಧ್ವನಿಗೂಡಿಸಿದರು.ಇದಕ್ಕೆ ಪ್ರತಿಕ್ರಿಯಿಸಿದ ಸಚಿವ ಸುರೇಶ್ ಕುಮಾರ್, ''ತಮ್ಮ ಸಂಕಷ್ಟಗಳನ್ನು ಪರಿಹರಿಸುವಂತಹ ಜನಪ್ರತಿನಿಧಿಗಳನ್ನು ಜನರು ಆಯ್ಕೆ ಮಾಡಬೇಕು. ಚುನಾವಣೆ ಬಹಿಷ್ಕರಿಸುವುದು ಪರಿಹಾರವಲ್ಲ, ಸಮಸ್ಯೆಯನ್ನು ಬಗೆಹರಿಸಲು ಈ ಸದನದ ಎಲ್ಲ ಸದಸ್ಯರು ಸೇರಿ ಪ್ರಯತ್ನ ಮಾಡೋಣ,'' ಎಂದರು.

### ಮಲೆನಾಡಿಗರ ಕಾಡುವ 'ಭೂತ'

ಈ 'ಭೂತ' ಬಹಳ ವರ್ಷಗಳಿಂದ ಕಾಡುತ್ತಿದೆ. ಎನ್‌ಜಿಟಿ ಮುಂದೆ ರಾಜ್ಯ ತನ್ನ ನಿಲುವು ಸ್ಪಷ್ಟಪಡಿಸಿಲ್ಲ, ಸರಕಾರ ಈಗಲಾದರೂ ಎಚ್ಚೆತ್ತುಕೊಂಡು ಅನಾಹುತಗಳನ್ನು ತಡೆಯಲು ಮುಂದಾಗಬೇಕು, ಇಲ್ಲವಾದರೆ ಅದರ ಪರಿಣಾಮಗಳು ಭೀಕರವಾಗಲಿವೆ.

**-ಕೆ.ಜಿ.ಬೋಪಯ್ಯ** ಬಿಜೆಪಿ ಶಾಸಕ

### ಬೂದಿ ಮುಚ್ಚಿದ ಕೆಂಡ

ಕಸ್ತೂರಿ ರಂಗನ್ ವರದಿ ಬೂದಿ ಮುಚ್ಚಿದ ಕೆಂಡದಂತೆ ಕಾಡುತ್ತಿದೆ. ಆ ಕೆಂಡ ಆಗಾಗ ತನ್ನ ಪ್ರಖರತೆ ಹೆಚ್ಚಿಸುತ್ತದೆ. ಜನರ ಆತಂಕವನ್ನು ಶಾಶ್ವತವಾಗಿ ದೂರ ಮಾಡಲು ಕ್ರಮ ಕೈಗೊಳ್ಳಬೇಕು.

**-ವಿಶ್ವೇಶ್ವರ ಹೆಗಡೆ** ಸ್ಪೀಕರ್

### ಜನಜೀವನಕ್ಕೆ ಧಕ್ಕೆ ತರುತ್ತದೆ

ವರದಿ ವಿರುದ್ಧ ಪ್ರತಿಭಟನೆಗಳು ನಡೆಯುತ್ತಿವೆ. ಅವೈಜ್ಞಾನಿಕವಾಗಿ ಪರಿಸರ ಸೂಕ್ಷ್ಮ ವಲಯದ ಸಮೀಕ್ಷೆ ಕಾರ್ಯ ನಡೆದಿದೆ. ಕೃಷಿ ಚಟುವಟಿಕೆ ಪ್ರದೇಶವನ್ನು ಅರಣ್ಯ ಎಂದು ಪರಿಗಣಿಸಲಾಗಿದೆ. ಪಶ್ಚಿಮಘಟ್ಟಗಳ ಸಂರಕ್ಷಣೆ ನೆಪದಲ್ಲಿ ಜನಜೀವನಕ್ಕೆ ಧಕ್ಕೆಯಾಗಬಾರದು ಎಂಬುದು ನಮ್ಮ ಆಗ್ರಹ.

**-ಸುನಿಲ್ ಕುಮಾರ್** ಬಿಜೆಪಿ ಶಾಸಕ

## ಜನರ ಹಿತರಕ್ಷಣೆಗೆ ಸರಕಾರ ಬದ್ಧ

ಡಾ.ಕೆ.ಕಸ್ತೂರಿ ರಂಗನ್ ವರದಿಯನ್ವಯ ರಾಜ್ಯದಲ್ಲಿನ ಪಶ್ಚಿಮಘಟ್ಟಗಳಲ್ಲಿನ ಪರಿಸರ ಸೂಕ್ಷ್ಮ ವಲಯದ 1533 ಗ್ರಾಮಗಳ ಜನರ ಹಿತರಕ್ಷಣೆಗೆ ಸರಕಾರ ಬದ್ಧವಾಗಿದೆ. ಈ ಬಗ್ಗೆ ಯಾರೊಬ್ಬರೂ ಆತಂಕ ಪಡುವ ಅಗತ್ಯವಿಲ್ಲ ಎಂದು ಅರಣ್ಯ ಸಚಿವ ಆನಂದ್ ಸಿಂಗ್ ಪರವಾಗಿ ಶಿಕ್ಷಣ ಸಚಿವ ಎಸ್. ಸುರೇಶ್ ಕುಮಾರ್ ಹೇಳಿದರು. ಕೇಂದ್ರ ಸರಕಾರವು ಕಸ್ತೂರಿ ರಂಗನ್ ವರದಿಗೆ ಸಂಬಂಧಿಸಿದಂತೆ 2018ರ ಅ.3 ರಂದು 4ನೇ ಕರಡು ಅಧಿಸೂಚನೆ ಹೊರಡಿಸಿದೆ. ಆದರೆ, ಈವರೆಗೆ ಅಂತಿಮ ಅಧಿಸೂಚನೆ ಹೊರಡಿಸಿಲ್ಲ. ಈ ಅಧಿಸೂಚನೆಯನ್ನು ರದ್ದುಪಡಿಸುವಂತೆ ಕೇಂದ್ರ ಸರಕಾರಕ್ಕೆ ಮುಖ್ಯಮಂತ್ರಿ ಪತ್ರ ಬರೆದು ಕೋರಿದ್ದಾರೆ. ಅಲ್ಲದೆ, ಈ ತಿಂಗಳ ಅಂತ್ಯದೊಳಗೆ ಸಂಪುಟ ಉಪ ಸಮಿತಿ ತನ್ನ ವರದಿಯನ್ನು ಕೇಂದ್ರ ಸರಕಾರಕ್ಕೆ ಕಳುಹಿಸಲಿದೆ, ಹಾಗಾಗಿ ಎನ್ ಜಿಟಿ ಮುಂದೆ ಸರಕಾರ ಮಧ್ಯಂತರ ಅರ್ಜಿ ಸಲ್ಲಿಸುವ ಬಗ್ಗೆ ಪರಿಶೀಲಿಸುತ್ತಿದೆ,'' ಎಂದು ವಿವರಣೆ ನೀಡಿದರು.

## ರಾಗಿ ಪ್ರದೇಶದವರು ಅರಣ್ಯ ಸಚಿವರಾದರೆ ಪಶ್ಚಿಮ ಘಟ್ಟ ಸಮಸ್ಯೆ ತಿಳಿಯುವುದು ಹೇಗೆ?

''ಪಶ್ಚಿಮ ಘಟ್ಟದ ಜನರಿಗೆ ಮಾರಕವಾದ ಕಸ್ತೂರಿ ರಂಗನ್ ವರದಿ ಬಗ್ಗೆ ರಾಜ್ಯ ಸರಕಾರ ಗಮನಹರಿಸುತ್ತಿಲ್ಲ, ಹಿಂದಿನ ಸರಕಾರವೂ ಆ ವಿಷಯವನ್ನು ಗಂಭೀರವಾಗಿ ಪರಿಗಣಿಸಿ ಎನ್‌ಜಿಟಿ ಮುಂದೆ ಅರ್ಜಿ ಹಾಕಿ ರಾಜ್ಯದ ವಾದವನ್ನು ಸಮರ್ಥವಾಗಿ ಮಂಡಿಸಿಲ್ಲ, ಅಧಿಕಾರಿಗಳು ಸುಮ್ಮನೆ ಕಾಲಹರಣ ಮಾಡುತ್ತಿದ್ದಾರೆ ಎಂದು ಮೂಡಿಗೆರೆ ಶಾಸಕ ಎಂ.ಪಿ.ಕುಮಾರಸ್ವಾಮಿ ಅಸಮಾಧಾನ ವ್ಯಕ್ತಪಡಿಸಿದರು.



''ರಾಜ್ಯದಲ್ಲಿ ಅರಣ್ಯ ಸಚಿವರು ರಾಗಿ, ಜೋಳ ಬೆಳೆಯುವ ಭಾಗದವರಾಗಿದ್ದಾರೆ. ಅವರಿಗೇನು ನಮ್ಮ ಸಮಸ್ಯೆ ಅರ್ಥವಾಗುತ್ತದೆ. ಅರಣ್ಯ ಪ್ರದೇಶದ ಶಾಸಕರನ್ನು ಅರಣ್ಯ ಸಚಿವರನ್ನಾಗಿ ಮಾಡಬೇಕು,'' ಎಂದು ಆಗ್ರಹಿಸಿದರು.

''ರಾಜ್ಯ ಸರಕಾರವು ಯಾವುದೇ ಕ್ರಮ ಕೈಗೊಳ್ಳದಿದ್ದರೆ ಅರಣ್ಯ ಭಾಗದ ಶಾಸಕರೆಲ್ಲಾ ಸೇರಿ ಸುಪ್ರೀಂಕೋರ್ಟ್ ಮೊರೆ ಹೋಗುವುದು ಅನಿವಾರ್ಯವಾಗುತ್ತದೆ,'' ಎಂದು ಆಕ್ರೋಶ ವ್ಯಕ್ತಪಡಿಸಿದರು. ಈ ವೇಳೆ ಸಭಾಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರು ''ನಿಮ್ಮನ್ನು ಸಚಿವರನ್ನಾಗಿ ಮಾಡಬೇಕಾ?'' ಎಂದು ಕಾಲೆಳೆದರು, ಅದಕ್ಕೆ, ''ಹಾಗೇನೂ ಇಲ್ಲ, ನಾನೇನು ಕೇಳ್ತಿಲ್ಲ','' ಎಂದು ಸಮ್ಮನಾದರು.

''ಪ್ರಾದೇಶಿಕ ಪಕ್ಷಗಳು ಪ್ರಾದೇಶಿಕವಾಗಿ ಜನರ ಹಿತ ಕಾಯ್ದುಕೊಳ್ಳುತ್ತವೆ. ಆದರೆ, ರಾಷ್ಟ್ರೀಯ ಪಕ್ಷಗಳು ಪ್ರಾದೇಶಿಕ ಹಿತ ಕಾಯ್ದುಕೊಳ್ಳುವುದಿಲ್ಲ ಎಂಬುದಕ್ಕೆ ಕಸ್ತೂರಿ ರಂಗನ್ ವರದಿ ವಿಚಾರ ಸಾಕ್ಷಿಯಾಗಿದೆ. ರಾಜ್ಯದ ಸಂಸದರು ಎಲ್ಲಿ ಹೋದರು? ಅವರೆಲ್ಲಾ ನಿದ್ದೆ ಮಾಡುತ್ತಿದ್ದಾರಾ,'' ಎಂದು ಬಿಜೆಪಿ ಸಂಸದರ ವಿರುದ್ಧ ಶಾಸಕ ಕುಮಾರಸ್ವಾಮಿ ಹರಿಹಾಯ್ದರು.

''ನಮ್ಮ ಪರಿಸರ ಕಾಪಾಡಿಕೊಳ್ಳುವುದು ನಮಗೆ ಗೊತ್ತಿದೆ. ಅದಕ್ಕೆ ದಿಲ್ಲಿ ಏಕೆ ನಮ್ಮನ್ನು ಕಂಟ್ರೋಲ್ ಮಾಡಬೇಕು. ಆ ಅಧಿಕಾರವನ್ನು ರಾಜ್ಯಕ್ಕೆ ಬಿಟ್ಟುಕೊಡಬೇಕು. ಕೇರಳದಲ್ಲಿ ಪ್ರಾದೇಶಿಕ ಪಕ್ಷ ಇರುವುದರಿಂದ ಅಲ್ಲಿನ ಹಿತ ಕಾಯ್ದುಕೊಳ್ಳುತ್ತಿದೆ. ಅದು ಎನ್‌ಜಿಟಿ ಮುಂದೆ ಸಮರ್ಥವಾದ ಮಂಡಿಸಿದೆ. ಅಂತೆಯೇ ರಾಜ್ಯದಲ್ಲೂ ಮರುಸಮೀಕ್ಷೆ ನಡೆಸಬೇಕು,'' ಎಂದು ಆಗ್ರಹಿಸಿದರು.